All India Radio: Bangalore

National Bulletin In Kannada

02.02.2025 13.10hrs

ರಾಷ್ಟ್ರೀಯ ವಾರ್ತೆಗಳು

ಮುಖ್ಯಾಂಶಗಳು

- ದೆಹಲಿ ವಿಧಾನಸಭಾ ಚುನಾವಣೆ; ವಿವಿಧ ಪಕ್ಷಗಳ ಮುಖಂಡರಿಂದ ಬಿರುಸಿನ ಪ್ರಚಾರ
- ವಸಂತ ಪಂಚಮಿ; ಪ್ರಯಾಗ್‌ರಾಜ್‌ನ ಮಹಾಕುಂಭಮೇಳದಲ್ಲಿ ಭಕ್ತರಿಂದ ಮೂರನೇ ಅಮೃತ ಸ್ನಾನ
- ಅಮೆರಿಕ ಸರಕುಗಳಿಗೆ ಶೇಕಡ ೨೫ ರಷ್ಟು ಆಮದು ಸುಂಕ ವಿಧಿಸಲು ಕೆನಡಾ ನಿರ್ಧಾರ
- ೧೯ ವರ್ಷದೊಳಗಿನವರ ಐಸಿಸಿ ಮಹಿಳಾ ಟಿ-೨೦ ವಿಶ್ವಕಪ್ ಕ್ರಿಕೆಟ್; ಭಾರತ ಮತ್ತು ದಕ್ಷಿಣ ಆಫ್ರಿಕಾ ಫೈನಲ್ ಪಂದ್ಯ ಪ್ರಗತಿಯಲ್ಲಿ

****************

ದೆಹಲಿ ವಿಧಾನಸಭಾ ಚುನಾವಣೆಯ ಬಹಿರಂಗ ಪ್ರಚಾರಕ್ಕೆ ನಾಳೆ ಸಂಜೆ ತೆರೆಬೀಳಲಿದ್ದು, ಮತದಾರರನ್ನು ಓಲೈಸಲು ಬಿಜೆಪಿ, ಕಾಂಗ್ರೆಸ್, ಆಮ್ ಆದ್ಮಿ ಪಕ್ಷ ಸೇರಿದಂತೆ ವಿವಿಧ ರಾಜಕೀಯ ಪಕ್ಷಗಳು ವಿವಿಧೆಡೆ ಸರ್ವಜನಿಕ ಸಭೆ, ರ್‍ಯಾಲಿ, ರೋಡ್‌ಶೋ ಆಯೋಜಿಸಿವೆ.

ಹಿರಿಯ ಬಿಜೆಪಿ ನಾಯಕ ಮತ್ತು ಪ್ರಧಾನಿ ನರೇಂದ್ರ ಮೋದಿ ಇಂದು ಮಧ್ಯಾಹ್ನ ಆರ್‌ಕೆ ಪುರಂನಲ್ಲಿ ಸಾರ್ವಜನಿಕ ಸಭೆ ಉದ್ದೇಶಿಸಿ ಮಾತನಾಡಲಿದ್ದಾರೆ. ಪಕ್ಷದ ನಾಯಕ ಮತ್ತು ಕೇಂದ್ರ ಸಚಿವ ರಾಜನಾಥ್ ಸಿಂಗ್, ರಾಜಿಂದರ್ ನಗರ, ಚಾಂದನಿ ಚೌಕ್ ಮತ್ತು ಲಕ್ಷ್ಮೀ ನಗರದಲ್ಲಿ ರ್‍ಯಾಲಿಗಳನ್ನು ನಡೆಸಲಿದ್ದಾರೆ.

ಆಮ್‌ಆದ್ಮಿ ಪಕ್ಷದ ಹಿರಿಯ ನಾಯಕ, ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್ ಪಕ್ಷದ ಅಭ್ಯರ್ಥಿಗಳ ಪರ ದೆಹಲಿ ವಿವಿಧೆಡೆ ಇಂದು ರೋಡ್ ಶೋ ನಡೆಸಲಿದ್ದಾರೆ. ಪಕ್ಷದ ಮತ್ತೊಬ್ಬ ಹಿರಿಯ ನಾಯಕ ಸಂಜಯ್ ಸಿಂಗ್, ದೆಹಲಿಯ ವಿವಿಧ ಪ್ರದೇಶಗಳಲ್ಲಿ ಚುನಾವಣಾ ಸಭೆಗಳನ್ನುದ್ದೇಶಿಸಿ ಭಾಷಣದ ಕಾರ್ಯಕ್ರಮಗಳು ನಿಗದಿಯಾಗಿವೆ.

ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಎಂ.ಮಲ್ಲಿಕಾರ್ಜುನ ಖರ್ಗೆ, ಮುಸ್ತಾಫಾಬಾದ್ ಕ್ಷೇತ್ರದಲ್ಲಿ ಚುನಾವಣಾ ಸಭೆ ನಡೆಸಲಿದ್ದಾರೆ. ಹಿರಿಯ ನಾಯಕರಾದ ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ, ದೆಹಲಿಯ ವಿವಿಧ ಕಡೆ ರ್‍ಯಾಲಿ ನಡೆಸಲಿದ್ದರೆ.

ಕಾಂಗ್ರೆಸ್ ನಾಯಕ ಅಜಯ್ ಮಾಕೆನ್ ಇಂದು ರಾಷ್ಟ್ರ ರಾಜಧಾನಿಯಲ್ಲಿ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಲಿದ್ದಾರೆ.

೭೦ ಸದಸ್ಯ ಬಲದ ದೆಹಲಿ ವಿಧಾನಸಭೆಗೆ ಇದೇ ೫ ರಂದು ಚುನಾವಣೆ ನಡೆಯಲಿದ್ದು, ಈ ತಿಂಗಳ ೮ ರಂದು ಮತ ಎಣಿಕೆ ನಡೆಯಲಿದೆ.

***************

ಉತ್ತರಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ ನಡೆಯುತ್ತಿರುವ ಮಹಾಕುಂಭ ಮೇಳಕ್ಕೆ ಭಕ್ತ ಸಾಗರವೇ ಹರಿದು ಬರುತ್ತಿದೆ.

ವಸಂತ ಪಂಚಮಿಯ ಈ ದಿನದಂದು ಮೂರನೇ ಅಮೃತ ಸ್ನಾನ ನಡೆಯುತ್ತಿದ್ದು, ಲಕ್ಷಾಂತರ ಭಕ್ತರು ಗಂಗಾ, ಯುಮುನಾ, ಸರಸ್ವತಿಯ ತ್ರಿವೇಣಿ ಸಂಗಮದಲ್ಲಿ ಮಿಂದು ಪಾವನರಾಗುತ್ತಿದ್ದಾರೆ.

ಮೊದಲ ಮತ್ತು ಎರಡನೇ ಅಮೃತಸ್ನಾನ ಮಕರ ಸಂಕ್ರಾಂತಿ ಹಾಗೂ ಮೌನಿ ಅಮಾವಾಸ್ಯೆಯಂದು ನಡೆದಿತ್ತು. ಈಗ ವಸಂತ ಪಂಚಮಿಯಂದು ಮೂರನೇ ಅಮೃತ ಸ್ನಾನ ಮಾಡಲಾಗುತ್ತದೆ.

ಭಾರೀ ಸಂಖ್ಯೆಯಲ್ಲಿ ಭಕ್ತರು ಬರುತ್ತಿರುವುದರಿಂದ ತ್ರಿವೇಣಿ ಸಂಗಮದಲ್ಲಿ ಭದ್ರತಾ ವ್ಯವಸ್ಥೆಗಳನ್ನು ಕೈಗೊಳ್ಳಲಾಗಿದೆ.

***************

ಇಂದು ವಸಂತ ಪಂಚಮಿ ಮತ್ತು ಸರಸ್ವತಿ ಪೂಜೆಯ ದಿನ. ಈ ಹಿನ್ನೆಲೆಯಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಮತ್ತು ಪ್ರಧಾನಿ ನರೇಂದ್ರ ಮೋದಿ ಅವರು, ದೇಶದ ಜನತೆಗೆ ಶುಭಾಶಯ ಕೋರಿದ್ದಾರೆ.

ಈ ಕುರಿತು ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿರುವ ರಾಷ್ಟ್ರಪತಿಗಳು, ಶಿಕ್ಷಣ ಮತ್ತು ಜ್ಞಾನದೊಂದಿಗೆ ಸಂಬಂಧ ಹೊಂದಿರುವ ಈ ಸಂತೋಷದಾಯಕ ಸಂದರ್ಭವು ದೇಶದ ಎಲ್ಲಾ ನಾಗರಿಕರಿಗೆ ಸಂತೋಷ, ಸಮೃದ್ಧಿ ಮತ್ತು ಬುದ್ಧಿವಂತಿಕೆಯನ್ನು ತರಲಿ. ಭಾರತ ವಿಶ್ವದ ಜ್ಞಾನ ಕೇಂದ್ರವಾಗಿ ಹೊರಹೊಮ್ಮಲಿದೆ ಎಂದು ಹಾರೈಸಿದ್ದಾರೆ.

****************

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಮೆಕ್ಸಿಕೋ, ಕೆನಡಾ ಹಾಗೂ ಚೀನಾದಿಂದ ಆಮದು ಮಾಡಿಕೊಳ್ಳುವ ವಸ್ತುಗಳ ಮೇಲೆ ಸುಂಕ ವಿಧಿಸಿದ್ದಾರೆ.

ನಿನ್ನೆ ರಾತ್ರಿ ಈ ಸಂಬಂಧ ಮೂರು ಕಾರ್ಯಕಾರಿ ಆದೇಶಗಳಿಗೆ ಅಧ್ಯಕ್ಷ ಟ್ರಂಪ್ ಸಹಿ ಹಾಕುವ ಮೂಲಕ ಅಮೆರಿಕದ ಪ್ರಮುಖ ಮೂರು ವ್ಯಾಪಾರ ಪಾಲುದಾರರ ಮೇಲೆ ಸುಂಕ ವಿಧಿಸಿದ್ದಾರೆ.

ಮೆಕ್ಸಿಕೋದ ಸರಕುಗಳ ಮೇಲೆ ಶೇಕಡ ೨೫ ರಷ್ಟು ಸುಂಕವನ್ನು ವಿಧಿಸಿದರೆ, ಕೆನಡಾದ ಸರಕುಗಳ ಮೇಲೆ ಶೇಕಡ ೨೫ ರಷ್ಟು, ಕೆನಡಾದ ಇಂಧನ ಮೂಲಗಳ ಮೇಲೆ ಶೇಕಡ ೧೦ ರಷ್ಟು ಸುಂಕವನ್ನು ವಿಧಿಸುವ ಕಾರ್ಯಕಾರಿ ಆದೇಶಗಳಿಗೆ ಅಧ್ಯಕ್ಷರು ಸಹಿ ಹಾಕಿದ್ದಾರೆ.

****************

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ವಿಧಿಸಿರುವ ಆಮದು ಸುಂಕಗಳಿಗೆ ಪ್ರತಿಯಾಗಿ ಕೆನಡಾ ಪ್ರಧಾನಿ ಜಸ್ಟಿನ್ ಟ್ರುಡೊ ಅವರು, ತಮ್ಮ ದೇಶಕ್ಕೆ ಆಮದಾಗುವ ೧೫೫ ಶತಕೋಟಿ ಡಾಲರ್ ಮೌಲ್ಯದ ಅಮೆರಿಕ ಸರಕುಗಳಿಗೆ ಶೇಕಡ ೨೫ ರಷ್ಟು ಸುಂಕವನ್ನು ಘೋಷಿಸಿದ್ದಾರೆ.

ಒಟ್ಟಾವದಲ್ಲಿ ಪ್ರತಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಮಂಗಳವಾರದಿಂದ ಪ್ರರಂಭವಾಗುವ ೩೦ ಶತ ಕೋಟಿ ಡಾಲರ್ ಮೌಲ್ಯದ ಅಮೆರಿಕ ಸರಕುಗಳಿಗೆ ಶೇಕಡ ೨೫ ರಷ್ಟು ಸುಂಕ ವಿಧಿಸುವುದಾಗಿ, ೨೧ ದಿನಗಳಲ್ಲಿ ೧೨೫ ಶತಕೋಟಿ ಡಾಲರ್ ಮೌಲ್ಯದ ಅಮೆರಿಕ ಸರಕುಗಳ ಮೇಲೆ ಇದೇ ರೀತಿಯ ಸುಂಕವನ್ನು ವಿಧಿಸುವುದಾಗಿ ಘೋಷಿಸಿದ್ದಾರೆ.

****************

ಗುಜರಾತ್‌ನ ಡಂಗ್ ಜಿಲ್ಲೆಯಲ್ಲಿ ಇಂದು ಮುಂಜಾನೆ ಖಾಸಗಿ ಬಸ್‌ವೊಂದು ಆಳವಾದ ಕಣಿವೆಗೆ ಉರುಳಿದ ಪರಿಣಾಮ ಇಬ್ಬರು ಮಹಿಳೆಯರು ಸೇರಿದಂತೆ ಐವರು ಪ್ರಯಾಣಿಕರು ಮೃತಪಟ್ಟಿದ್ದಾರೆ.

ಅಪಘಾತದಲ್ಲಿ ಗಂಭೀರವಾಗಿ ಗಾಯಗೊಂಡಿರುವ ೧೫ ಮಂದಿಯನ್ನು ಆಹ್ವಾದ ಸಿವಿಲ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಒಟ್ಟು ೪೮ ಪ್ರಯಾಣಿಕರಿದ್ದ ಬಸ್ ರಸ್ತೆಯ ಪಕ್ಕದ ತಡೆಗೋಡೆಗೆ ಅಪ್ಪಳಿಸಿ ೩೫ ಅಡಿ ಆಳದ ಕಣಿವೆಗೆ ಉರುಳಿದ ಪರಿಣಾಮ ಈ ಅಪಘಾತ ಸಂಭವಿಸಿದೆ.

****************

ಭಾರತೀಯ ನೌಕಾಪಡೆಯ ಹಾಫ್ ಮ್ಯಾರಥಾನ್‌ಗೆ ಕ್ರೀಡಾ ಸಚಿವ ಮನ್ಸುಖ್ ಮಾಂಡವಿಯಾ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಸಚಿವರು, ಇಂದಿನ ಯುವಜನತೆಗೆ ಸ್ಥೂಲಕಾಯತೆ ಪ್ರಮುಖ ಸವಾಲಾಗಿದೆ. ವಿಶ್ವ ಆರೋಗ್ಯ ಸಂಸ್ಥೆಯ ವರದಿಯಂತೆ ವಿಶ್ವದ ಪ್ರತೀ ೮ರಲ್ಲಿ ಒಬ್ಬರು ಸ್ಥೂಲಕಾಯದಿಂದ ಉದ್ಭವಿಸುವ ಸಮಸ್ಯೆಗಳಿಂದ ಬಳಲುತ್ತಿದ್ದಾರೆ. ಸೈಕ್ಲಿಂಗ್ ಮೂಲಕ ತಮ್ಮನ್ನು ತಾವು ಅರೋಗ್ಯವಂತರಾಗಿಸಬಹುದು. ಹಾಗಾಗಿ ಪ್ರತೀ ಭಾನುವಾರ ಸೈಕ್ಲಿಂಗ್ ಸೇರಿದಂತೆ ಇತರ ಚಟುವಟಿಕೆಗಳಲ್ಲಿ ಕರೆ ನೀಡಿದರು.

ಧ್ವನಿ; ಮನ್ಸುಖ್ ಮಾಂಡವೀಯ

****************

ನೆದರ್‌ಲ್ಯಾಂಡ್ಸ್‌ನಲ್ಲಿ ನಡೆಯುತ್ತಿರುವ ಟಾಟಾ ಸ್ಟೀಲ್ ಚೆಸ್ ಟೂರ್ನಿಯಲ್ಲಿ ಭಾರತೀಯ ಗ್ರ್ಯಾಂಡ್‌ಮಾಸ್ಟರ್ ಆರ್.ಪ್ರಜ್ಞಾನಂದ ನಿನ್ನೆ ನಡೆದ ಪಂದ್ಯದಲ್ಲಿ ಸೆರ್ಬಿಯಾದ ಅಲೆಕ್ಸಿ ಸರನಾ ಅವರನ್ನು ಸೋಲಿಸಿದ್ದಾರೆ.

ಮತ್ತೊಂದೆಡೆ, ವಿಶ್ವ ಚಾಂಪಿಯನ್ ದೊಮ್ಮರಾಜು ಗುಕೇಶ್ ಹಾಗೂ ನೆದರ್‌ಲ್ಯಾಂಡ್ಸ್‌ನ ಜೋರ್ಡೆನ್ ವ್ಯಾನ್ ಫಾರೆಸ್ಟ್ ನಡುವಿನ ಪಂದ್ಯ ಡ್ರಾನಲ್ಲಿ ಅಂತ್ಯಗೊಂಡಿದೆ. ಆ ಮೂಲಕ ೧೨ ಸುತ್ತಿನ ಪಂದ್ಯಗಳ ನಂತರ ೮.೫ ಅಂಕಗಳೊಂದಿಗೆ ಪ್ರಜ್ಞಾನಂದ ಮತ್ತು ಡಿ.ಗುಕೇಶ್ ಟೂರ್ನಿಯ ಅಗ್ರ ಆಟಗಾರರಾಗಿದ್ದಾರೆ.

****************

ಭಾರತೀಯ ಕ್ರಿಕೆಟ್ ನಿಯಂತ್ರಣಾ ಮಂಡಳಿ- ಬಿಸಿಸಿಐ, ಭಾರತೀಯ ಕ್ರಿಕೆಟ್ ರಂಗದ ಹಿರಿಯ ಆಟಗಾರ ಭಾರತ ರತ್ನ ಸಚಿನ್ ತೆಂಡೂಲ್ಕರ್ ಅವರಿಗೆ ಮುಂಬೈನಲ್ಲಿ ನಿನ್ನೆ ನಡೆದ ೨೦೨೫ರ

ನಮನ್ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ 'ಕರ್ನಲ್ ಸಿ.ಕೆ.ನಾಯ್ಡು' ಜೀವಮಾನ ಸಾಧನೆ ಪ್ರಶಸ್ತಿ ನೀಡಿ ಗೌರವಿಸಿತು.

ಕಳೆದ ಎರಡು ದಶಕಗಳಲ್ಲಿ ಭಾರತೀಯ ಕ್ರಿಕೆಟ್ ರಂಗಕ್ಕೆ ನೀಡಿದ ಅಪ್ರತಿಮ ಕೊಡುಗೆಗಾಗಿ ತೆಂಡೂಲ್ಕರ್ ಅವರನ್ನು ಐಸಿಸಿ ಅಧ್ಯಕ್ಷ ಜೈಶಾ ಗೌರವಿಸಿದರು.

ಭಾರತೀಯ ಕ್ರಿಕೆಟ್ ರಂಗದಲ್ಲಿ ತಮ್ಮ ವೇಗದ ಬೌಲಿಂಗ್‌ನಿಂದಲೇ ಹೆಸರುವಾಸಿಯಾಗಿರುವ ಜಸ್ಪ್ರೀತ್ ಬೂಮ್ರಾ ಅವರಿಗೆ ೨೦೨೪ ರಲ್ಲಿನ ಅದ್ಭುತ ಪ್ರದರ್ಶನಕ್ಕಾಗಿ ಅತ್ಯುತ್ತಮ ಅಂತಾರಾಷ್ಟ್ರೀಯ ಕ್ರಿಕೆಟ್ ಕ್ರೀಡಾಪಟುವಿಗೆ ನೀಡುವ ಪ್ರತಿಷ್ಠಿತ 'ಪಾಲಿ ಉಮ್ರಿಗರ್' ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.

ಭಾರತೀಯ ಮಹಿಳಾ ತಂಡದ ಉಪನಾಯಕಿ ಸ್ಮೃತಿ ಮಂದಾನ ನಾಲ್ಕನೇ ಬಾರಿಗೆ ಅತ್ಯುತ್ತಮ ಅಂತಾರಾಷ್ಟ್ರೀಯ ಮಹಿಳಾ ಕ್ರಿಕೆಟ್ ಪಟು ಪ್ರಶಸ್ತಿ ಭಾಜನರಾದರು.

****************

ಮಲೇಷಿಯಾದ ಕೌಲಾಲಂಪುರದಲ್ಲಿ ನಡೆಯುತ್ತಿರುವ ೧೯ ವರ್ಷದೊಳಗಿನವರ ಐಸಿಸಿ ಮಹಿಳಾ ಟಿ-೨೦ ವಿಶ್ವಕಪ್ ಕ್ರಿಕೆಟ್ ಫೈನಲ್ ಪಂದ್ಯದಲ್ಲಿ ಭಾರತ ಮತ್ತು ದಕ್ಷಿಣ ಆಫ್ರಿಕಾ ಮುಖಾಮುಖಿಯಾಗಿವೆ.

ಟಾಸ್ ಗೆದ್ದು ಬ್ಯಾಟಿಂಗ್ ಆಯ್ದುಕೊಂಡ ದಕ್ಷಿಣ ಆಫ್ರಿಕಾ ವನಿತೆಯರ ತಂಡ, ಇತ್ತೀಚಿನ ವರದಿಯಂತೆ ೧೭ ಓವರ್‌ಗಳಲ್ಲಿ ೫ ವಿಕೆಟ್ ನಷ್ಟಕ್ಕೆ ೬೭ ರನ್ ಮಾಡಿ ಆಡುತ್ತಿದೆ.

********ಮುಕ್ತಾಯ********